ಅನ್ನಭಾಗ್ಯ ಯೋಜನೆಯ ಅಕ್ರಮಗಳು

3820(4538); ಡಾ॥ ರಫೀಕ್ ಅಹ್ಮದ್ ಎಸ್

ಅ) ಅನ್ನಭಾಗ್ಯ ಯೋಜನೆ ಜಾರಿಯಾದಾಗಿನಿಂದ ಇದೂವರೆಗೆ ವರದಿ ಆಗಿರುವ ಅಕ್ರಮಗಳ ಸಂಖ್ಯೆ; ಹಾಗೂ ಸಾಬೀತಾಗಿರುವ ಅಕ್ರಮ ಪ್ರಕರಣಗಳ ಸಂಖ್ಯೆ ಎಷ್ಟು; ಸಾಬೀತಾಗಿರುವ ಪ್ರಕರಣಗಳಲ್ಲಿ ತಪ್ಪಿತಸ್ಥರ ಮೇಲೆ ಕೈಗೊಂಡಿರುವ ಕ್ರಮಗಳೇನು;

ಆ) ಕಡಿಮೆ ದರದಲ್ಲಿ ಎಪಿಎಲ್ ಪಡಿತರ ಚೀಟಿದಾರರಿಗೆ ಪಡಿತರ ವಿತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ನ್ಯಾಯಬೆಲೆ ಅಂಗಡಿಗಳನ್ನು ಮಠ, ಚರ್ಚ್ ಹಾಗೂ ಮಸೀದಿಗಳ ಆಡಳಿತ ಮಂಡಳಿಗಳು ಹಾಗೂ ಸೇವಾ ಸಂಸ್ಥೆಗಳಿಗೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಅನ್ನಭಾಗ್ಯ ಯೋಜನೆಯು ಜಾರಿಯಾದಾಗಿನಿಂದ ಜೂನ್–2014 ರವರೆಗೆ ಅಕ್ಕಿ ಅಕ್ರಮ ಕಳ್ಳಸಾಗಾಣಿಕೆಗೆ ಸಂಬಂಧಿಸಿದಂತೆ ವರದಿಯಾಗಿದ್ದ ಎಲ್ಲಾ 78 ಪ್ರಕರಣಗಳು ಅಕ್ರಮ ನಡೆಸಿರುವ ಬಗ್ಗೆ ಸಾಬೀತಾಗಿದ್ದು, ಒಟ್ಟು 105 ಮಂದಿಗಳ ವಿರುದ್ಧ ಅಗತ್ಯ ಕಾಯ್ದೆ 1955ರಡಿ ಕ್ರಮಕೈಗೊಳ್ಳಲಾಗಿದೆ.

ಅದೇ ರೀತಿ ಅನ್ನಭಾಗ್ಯ ಯೋಜನೆಯ ಅಕ್ಕಿ ವಿತರಣೆಯಲ್ಲಿ 222 ನ್ಯಾಯಬೆಲೆ ಅಂಗಡಿಗಳು ಅಕ್ರಮವೆಸಗಿರುವ ಬಗ್ಗೆ ವರದಿಯಾಗಿದ್ದು ಈ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಅಕ್ರಮ ಎಸಗಿರುವ ಬಗ್ಗೆ ಸಾಬೀತಾಗಿದ್ದು ಇವುಗಳ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳ ಸಾ.ವಿ.ಪ ನಿಯಂತ್ರಣ ಆದೇಶ 1992ರಲ್ಲಿ ಕ್ರಮ ಕೈಗೊಳ್ಳಲಾಗಿದ್ದು, 223 ಮಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಈ ಪ್ರಕರಣಗಳಲ್ಲಿ ಭಾಗಿಯಾಗಿರುವ ಇಲಾಖೆಯ 14 ಮಂದಿ ಅಧಿಕಾರಿ/ನೌಕರರಲ್ಲಿ, 3 ಉಪನಿರ್ದೇಶಕರು 1 ಸಹಾಯಕ ನಿರ್ದೇಶಕರು 1 ದ್ವಿ.ದ.ಸ 9 ಜನ ಆಹಾರ ನಿರೀಕ್ಷಕರುಗಳು ಸೇರಿದ್ದು, ಇವರಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆಗೆ ಒಳಪಡಿಸಿದೆ. ಕೆಎಫ್‌ಸಿಎಸ್‌ಸಿ ನಿಗಮದ ಇಬ್ಬರು ಈ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಒಬ್ಬರು ವ್ಯವಸ್ಥಾಪಕರು ಹಾಗೂ ಇನ್ನೊಬ್ಬರು ಉಗ್ರಾಣದ ಸಹಾಯಕರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆಗೆ ಒಳಪಡಿಸಿದೆ.

ಆ) ಇಲ್ಲ.

ಇ) ಇಲ್ಲ.

ಅಭಿವೃದ್ಧಿ ಕಾಮಗಾರಿಗಳು

3821(4531); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ 2014–15ನೇ ಸಾಲಿಗೆ ಹಮ್ಮಿಕೊಂಡಿರುವ ಅಭಿವೃದ್ಧಿ ಯೋಜನೆಗಳು ಯಾವುವು; ಇದರ ಒಟ್ಟು ಮೊತ್ತ ಎಷ್ಟು;

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇಲಾಖೆ ಹಮ್ಮಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳ, ಅದರ ಪ್ರಗತಿ ಹಾಗೂ ಮೊತ್ತ ಎಷ್ಟು (ವಿಧಾನ ಸಭೆ ಕ್ಷೇತ್ರವಾರು ವಿವರ ನೀಡುವುದು)

ಇ) ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿವೆ; ಯಾವಾಗ ಪೂರ್ಣಗೊಳಿಸಲಾಗುವುದು;

ಈ) ಕಾಮಗಾರಿಗಳು ಗುಣಮಟ್ಟ ವೀಕ್ಷಣೆಗೆ ಮೂರನೇ ಪಾರ್ಟಿ ವೀಕ್ಷಣೆ ಆಗಿದೆಯೇ; ಹಾಗಿದ್ದಲ್ಲಿ ಅವರ ವಿವರ ಒದಗಿಸುವುದು;